**ಆಧುನಿಕ ಜಗತ್ತಿನ ಜಾನಪದವಾಗಿರುವ ಸಿನಿಮಾ ಹಲಬಗೆಯಲ್ಲಿ ನೋಡುಗರನ್ನು ಕಾಡುತ್ತ, ಪರವಶಗೊಳಿಸುತ್ತ ಬಂದಿದೆ. ವಿಶಿಷ್ಟ ಸಿನಿಮಾಗಳ ಮಾಂತ್ರಿಕತೆಯನ್ನು ಚಿತ್ರರಸಿಕರಿಗೆ ಇಲ್ಲಿ ಪರಿಚಯಿಸಲಾಗುತ್ತದೆ. ತಮ್ಮ ಚಿತ್ತದ ಬೆಳ್ಳಿತೆರೆಯಲ್ಲಿ ದಾಖಲಾದ, ಮನಸ್ಸನ್ನು ಸೂರೆಗೊಂಡ ಅನನ್ಯ ಸಿನಿಮಾ ಒಂದರ ಚಿತ್ರಕ ಬರವಣಿಗೆ ಇಲ್ಲಿದೆ**

'ಬಿಯಾಂಡ್ ದ ಕ್ಲೌಡ್ಸ್' ಇರಾನ್‌ನ ಮಜೀದ್ ಮಜಿದಿ ನಿರ್ದೇಶಿಸಿರುವ ಭಾರತೀಯ ಚಿತ್ರ. ಹಿಂದಿ, ತಮಿಳು ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ನಿರ್ಮಾಣವಾಗಿರುವ 2017ರ ಚಿತ್ರ. 'ಚಿಲ್ಡ್ರನ್ಸ್ ಆಫ್ ಹೆವನ್', 'ಸಾಂಗ್ ಆಫ್ ಸ್ಪಾರೊಸ್', 'ಬರಾನ್', 'ಕಲರ್ ಆಫ್ ಪ್ಯಾರಡೈಸ್', 'ಮುಹಮ್ಮದ್ ದ ಮೆಸೆಂಜರ್ ಆಫ್ ಗಾಡ್' ಮತ್ತಿತರ ಚಿತ್ರಗಳ ಮೂಲಕ ಮಜಿದಿ ಸಿನಿಮಾ ಜಗತ್ತಿನ ಗಮನ ಸೆಳೆದ ಪ್ರತಿಭಾವಂತರು. ಅವರು ಭಾರತೀಯ ಚಿತ್ರವೊಂದನ್ನು ನಿರ್ದೇಶಿಸುತ್ತಾರೆಂಬ ಸುದ್ದಿ ಕೇಳಿ ಬಂದಾಗ ಸಿನಿಮಾಸಕ್ತರಲ್ಲಿ ಅಪಾರ ಕುತೂಹಲಕ್ಕೆ ಕಾರಣವಾಗಿತ್ತು.

'ಬಿಯಾಂಡ್ ದ ಕ್ಲೌಡ್ಸ್' ಇತ್ತೀಚೆಗೆ ಗೋವಾದಲ್ಲಿ ನಡೆದ 48ನೆಯ ಅಂತರರಾಷ್ಟ್ರೀಯ ಚಿತ್ರೋತ್ಸವದ ಉದ್ಘಾಟನಾ ಚಿತ್ರವಾಗಿ ಪ್ರದರ್ಶನಗೊಂಡು ಗಮನ ಸೆಳೆಯಿತು.

ಮುಂಬಯಿನ ಮಾದಕ ವಸ್ತುಗಳ ಮಾರಾಟ ಜಾಲಕ್ಕೆ ಸಿಕ್ಕಿಕೊಂಡ ಹುಡುಗ ಅಮೀರ್ ಮತ್ತು ಅವನ ಅಕ್ಕ ತಾರಾಳ ಬದುಕಿನ ದುರಂತಗಳನ್ನು ಸೂಕ್ಷ್ಮವಾಗಿ ಹೇಳುವ ಸಿನಿಮಾ. ಅವರ ಮೂಲಕ ಮಜಿದಿ ಮುಂಬಯಿನ ದಟ್ಟ ಸಾಂದ್ರ ಜನಜೀವನ, ವೇಶ್ಯಾವಾಟಿಕೆ, ರಸ್ತೆಗಳ ಬದಿಗಳಲ್ಲಿ, ಕೊಳೆಗೇರಿಗಳಲ್ಲಿ, ಸೇತುವೆಗಳ ಕೆಳಗೆ ಬದುಕು ಕಟ್ಟಿಕೊಂಡ ಬಡವರ ಬವಣೆಗಳನ್ನೂ ಹೇಳುತ್ತಲೇ ಮುಂಬಯಿನ ದುರಂತ ಮುಖಗಳನ್ನು ಕಟ್ಟಿಕೊಟ್ಟಿದ್ದಾರೆ.

ಹಣಕ್ಕಾಗಿ ಯಾವ ಕೆಲಸವಾದರೂ ಮಾಡಲು ಮುಂದೆ ಬರುವ ಅಮಾಯಕ ಹುಡುಗರನ್ನು ಬಳಸಿಕೊಂಡು ಅವರಿಂದ ಕಾನೂನುಬಾಹಿರ ಕೃತ್ಯಗಳನ್ನು ಮಾಡಿಸುವ ಮಧ್ಯವರ್ತಿಗಳು, ಅವರ ಗೂಂಡಾಗಳು, ಜಿಡ್ಡುಗಟ್ಟಿದ ಪೊಲೀಸ್ ಮತ್ತು ಕಾನೂನು ವ್ಯವಸ್ಥೆ ಇತ್ಯಾದಿಗಳ ಮೇಲೂ ಮಜಿದಿ ಬೆಳಕು ಚೆಲ್ಲುತ್ತ ಪ್ರೇಕ್ಷಕರಲ್ಲಿ ಗಾಢ ವಿಷಾದವನ್ನೂ, ವ್ಯವಸ್ಥೆಯ ಮೇಲೆ ಜಿಗುಪ್ಸೆಯನ್ನೂ ಹುಟ್ಟಿಸುತ್ತಾರೆ.

ಮುಂಬಯಿ ಸೇರಿದಂತೆ ದೇಶದ ಹಲವಾರು ನಗರಗಳಲ್ಲಿ ನಿತ್ಯ ನಡೆಯುವ ಅಕ್ರಮ ಚಟುವಟಿಕೆಗಳನ್ನು ಕಥೆಯಾಗಿಟ್ಟುಕೊಂಡ ಹಲವಾರು ಸಿನಿಮಾಗಳು